ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ ಮೂಡಬಿದಿರೆ

ಸಿಸಿ ನಂ.654/2019 ,

ಚಾಸಾ- 3, ಪ್ರಾಸಾ -3

| | |
|---|---|
| ಹೆಸರು | ಗಣೇಶ್ |
| ತಂದೆಯ ಹೆಸರು | ರಾಮಗೌಡ |
| ವಯಸ್ಸು | 53 ವರ್ಷ |
| ಕೆಲಸ | ಬೀಡಿ ಕಂಪನಿಯಲ್ಲಿ ಕೆಲಸ |
| ವಾಸ | ಮಾಸ್ತಿ ಕಟ್ಟೆ |
| ಪ್ರಮಾಣೀಕರಿಸಿದ ದಿನಾಂಕ | 22-01-2023 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಚಾಸಾ-1 ಮತ್ತು ಚಾಸಾ-2 ಗೊತ್ತು . ಮೃತ ಮಹಾಬಲ ಶೆಟ್ಟಿ ಗೊತ್ತು . ಆರೋಪಿ ಗೊತ್ತು . ಜನವರಿ 7 ನೇ ತಾರೀಖಿನಂದು ಸಂಜೆ ಸುಮಾರು 8-00 ಗಂಟೆಯ ಹೊತ್ತಿಗೆ ನಾನು ಚಾಸಾ-1 ರವರ ಅಂಗಡಿಯಲ್ಲಿ ಸಾಮಾನು ಖರೀದಿಸಲು ನಿಂತುಕೊಂಡಿದ್ದೇನು . ಮಹಾಬಲ ಶೆಟ್ಟಿಯವರು ಅಂಗಡಿಗೆ ನಡೆದುಕೊಂಡು ಬರುತ್ತಿರುವಾಗ ಒಂದು ಆಕ್ಟೀವಾ ಸ್ಕೂಟರ್ ನ್ನು ಆರೋಪಿಯ ಚಲಾಯಿಸಿಕೊಂಡು ಬಂದು ಅಪಘಾತ ಪಡಿಸಿರುತ್ತಾರೆ . ಇದರಿಂದಾಗ ಮಹಾಬಲ ಶೆಟ್ಟಿಯವರಿಗೆ ಕಾಲಿಗೆ ತೀವ್ರತರಹವಾದ ಗಾಯವಾಗಿರುತ್ತದೆ . ಅವರನ್ನು ಆ್ಯಂಬುಲೆನ್ಸ್ ಒಂದರಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ . ನಂತರ ಮಾರನೆ ದಿನ ಪೊಲೀಸರು ಸ್ಥಳಕ್ಕೆ ಮಹಜರ್ ಮಾಡಿರುತ್ತಾರೆ. ಸಾಕ್ಷಿ ನಿಪಿ-3 ನಿಪಿ-4 ರಲ್ಲಿ ಇರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಮತ್ತು ನಿಪಿ-4(ಸಿ) ಎಂದು ಗುರುತಿಸಲಾಯಿತು.

2. ಸದರಿ ಸಮಯ ಚಾಸಾ-1 ಮತ್ತು ಚಾಸಾ-2 ರವರು ಸ್ಥಳದಲ್ಲಿ ಹಾಜರಿದ್ದರು . ಮಹಜರನ್ನು ಎಷ್ಟು ಗಂಟೆಗೆ ಮಾಡಿರುತ್ತಾರೆ ಎಂದು ಗೊತ್ತಿಲ್ಲ . ಮಧ್ಯಾಹ್ನದ ಹೊತ್ತಿಗೆ ಮಾಡಿರಬಹುದು , ಏನು ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಮಹಾಬಲಶೆಟ್ಟಿಯವರು ಚಿಕಿತ್ಸೆ ಫಲಕಾರಿಯಾಗದೆ ಮರುದಿನ ಮೃತಪಟ್ಟಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ . ಈ ಬಗ್ಗೆ ಚಾಸಾ-1 ರವರು ದೂರನ್ನು ನೀಡಿರುತ್ತಾರೆ . ಸಾಕ್ಷಿ ನಿಪಿ-2 ನ್ನು ನೋಡಿ ಗುರುತಿಸಿರುತ್ತಾರೆ.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

1. ಅಪಘಾತವು ದಿಃ 07-01-2019 ರಂದು ಸಂಜೆ ಸುಮಾರು 7-30 ಗಂಟೆಗೆ ಮಾಸ್ತಿಕಟ್ಟೆಯ ಹಿರಿಯ ಪ್ರಾಥಮಿಕ ಶಾಲೆಯ ಬಳಿ ಡಾಂಬಾರು ರಸ್ತೆಯಲ್ಲಿ ಜರುಗಿರುತ್ತದೆ ಎಂದರೆ ಸರಿ . ದಿಃ 08-01-2019 ರಂದು ಮಹಜರನ್ನು 05-00 ರಿಂದ 05-30 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ . ಸದರಿ ಸಮಯ ಮೋಟಾರು ಸೈಕಲ್ ನಂ. ಕೆಎ-19 ಇ ಎಂ 9866 ನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಆರೋಪಿಯು ಮುಂದೆ ಇರುವ ಆರೋಪಿಯು ಆ ದಿನ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಬಂದು ಮಹಾಬಲಶೆಟ್ಟಿಯವರಿಗೆ ಅಪಘಾತಪಡಿಸಿರುತ್ತಾರೆ ಎಂದರೆ ಸರಿ. ನಾನು ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ .

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ರವರಿಂದಃ

1. ನಾನು ಚಾಸಾ-1 ರವರ ಅಂಗಡಿಯಲಿಲ ಸಾಮಾನು ಖರಿದಿ ಮಾಡುತ್ತಿದ್ದೆನು .

ಅಪಘಾತ ಸಮಯದಲ್ಲಿ ಚಾಸಾ-2 ರವರು ಅವರ ಮನೆಯಲ್ಲಿ ಇದ್ದರು . ಚಾಸಾ-1 ರವರು ಅವರ ಅಂಗಡಿಯೊಳಗೆ ಕೆಲಸ ಮಾಡುತ್ತಿದ್ದರು . ಅಪಘಾತವಾದ ಸಮಯದಲ್ಲಿ ಕತ್ತಲಾಗಿತ್ತು ಎಂದರೆ ವಾಹನಗಳ ಬೆಳಕು ಇತ್ತು . ಬೈಕಿಗೆ ಸ್ಟೀಲ್ ನ ಗಾರ್ಡ್ ಇತ್ತು . ಗರ್ಡಿನ ಬಲ ಬದಿ ಜಖಂ ಆಗಿದೆ ಎಂದರೆ ಸರಿ . ಅಪಘಾತವಾದ ತಕ್ಷಣ ಪೊಲೀಸರು ಬಂದಿರುತ್ತಾರೋ ಇಲ್ಲವೊ ನನಗೆ ಗೊತ್ತಿಲ್ಲ . ಪೊಲೀಸರು ನನ್ನನ್ನು ಮರುದಿನ ಬೆಳಿಗ್ಗೆ ಕರೆದಿರುತ್ತಾರೆ . ಬೆಳಿಗ್ಗೆ ಬಂದಂತಹ ಪೊಲೀಸರು ಬೈಕಿನ ಬಲ ಬದಿ ಗಾರ್ಡ್ ಜಖಂ ಆಗಿರುವುದನ್ನು ನೋಡಿರುತ್ತಾರೆ . ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ . ಮರುದಿನ ಬಂದಂತಹ ಪೊಲೀಸರು ಸ್ಥಳದಲ್ಲಿ ಮುಕ್ಕಾಲು ಗಂಟೆ ಇದ್ದರು . 11-00 ಗಂಟೆಯೊಳಗೆ ಹೋಗಿರುತ್ತಾರೆ . ನಾನು ಪೊಲೀಸರು ಹೇಳಿಕೆ ನೀಡಿರುವುದಿಲ್ಲ , ಚಾಸಾ-1 ರವರು ನೀಡಿರುತ್ತಾರೆ .

2. ನಾನು ಅಂಗಡಿಯಲ್ಲಿ ಸಾಮಾನು ಖರೀದಿ ಮಾಡುವ ಸಮಯದಲ್ಲಿ ಜೊರಾಗಿ ಬೊಬ್ಬೆ ಕೇಳಿಸಿರುತ್ತದೆ , ಏನಾಯಿತು ಎಂಕು ನಾನು ತಿರುಗಿ ನೋಡಿರುತ್ತೇನೆ . ತಿರುಗಿ ನೋಡುವಂತಹ ಸಮಯದಲ್ಲಿ ಯಾರೋ ಬೊಬ್ಬೆ ಹೊಡದದ್ದು ಕೇಳಿರುತ್ತದೆ , ತಕ್ಷಣ ನಾನು ಅವರ ಸಹಾಯಕ್ಕೆ ಹೋಗಿರುತ್ತೇನೆ . ಅವರು ಬಿದ್ದದ್ದನ್ನು ನೋಡಿ ನಾನು ಚಾಸಾ-1 ರವರು ಹೇಳಿರುತ್ತೇನೆ. ಅಂಗಡಿಯಲ್ಲಿ ಇದ್ದ ಚಾಸಾ-1 ರವರೂ ಸಹ ಬಂದಿರುತ್ತಾರೆ . ಅಪಘಾತವಾದ ಸ್ಥಳದಲ್ಲಿ ಮೊಟಾರು ಬೈಕು ಸಹ ಬಿದ್ದಿರುತ್ತದೆ .

3. ಮೃತ ಮಹಾಬಲ ಶೆಟ್ಟಿಯವರು ಅಬ್ದುಲ್ ರವರ ಮನೆಯಿಂದ ಚಾಸಾ-1 ರವರ ಅಂಗಡಿಗೆ ಬರುತ್ತಿದ್ದರು . ಅಬ್ದುಲ್ ರವರ ಮನೆಯು ಮೂಡಬಿದ್ರೆ - ಇರುವೈಲು ರಸ್ತೆಯಹ ಬಲಬದಿಯಲ್ಲಿ ಇದೆ .

ಡಾಂಬಾರು ರಸ್ತೆಯಲ್ಲಿ ಗಾಜಿನ ಚೂರು ಹಾಗೂ ರಕ್ತದ ಕಲೆ ಎಲ್ಲಾ ಬಿದ್ದಿರುತ್ತದೆ . ಡಾಂಬಾರು ರಸ್ತೆಯ ಮಧ್ಯದಲ್ಲಿ ಬ್ರೇಕಿನ ಮಾರ್ಕ್ ಸಹ ಇತ್ತು . ಬ್ರೇಕಿನ ಮಾರ್ಕ್ ಎಲ್ಲಿ ಇತ್ತೋ ಅಲ್ಲೆ ಅಪಘಾತವಾಗಿರುತ್ತದೆ ಎಂದು ಚಾಸಾ-1 ರವರು ಪೊಲೀಸರಿಗೆ ತಿಳಿಸಿರುತ್ತಾರೆ .

4, ಚಾಸಾ-1 ರವರು ಅಂಗಡಿಗೆ ಬರಬೇಕಾದಾರೆ ಅಬ್ದುಲ್ ರವರ ಮನೆಯಿಂದ ಮೂಡಬಿದ್ರೆ - ಇರುವೈಲು ರಸ್ತೆ ದಾಟಿ ಬರಬೇಕಾಗುತ್ತದೆ . ಬ್ರೇಕಿನ ಮಾರ್ಕ್ ಇದ್ದ ಕಡೆ ಗಾಜಿ ಚೂರು ಹಾಗೂ ರಕ್ತ ಕಲೆ ಎಲ್ಲಾ ಇತ್ತು . ಮಹಾಬಲ ಶೆಟ್ಟಿಯವರೂ ಸಹ ಬ್ರೇಕಿನ ಮಾರ್ಕ್ ಇದ್ದ ಸ್ಥಳದಲ್ಲೆ ಬಿದ್ದಿದ್ದರು . ಮರುದಿನ ಪೊಲೀಸರು ಬಂದಾಗ ಒಂದು ಸಹಿ ಮಾತ್ರ ಹಾಕಿದ್ದನ್ನು ಹೊರತು ಪಡಿಸಿ ಬೇರೆ ಯವೂದೇ ಹೇಳಿಕೆ ನೀಡಿರುವುದಿಲ್ಲ . ಅವರು ಕೋರ್ಟಿನಲ್ಲಿ ಸಾಕ್ಷಿ ನುಡಿಯಲು ತಿಳಿಸಿರುತ್ತಾರೆ . ಮಹಾಬಲ ಶೆಟ್ಟಿಯವರ ಮಗ ಸುನೀಲ್ ಶೆಟ್ಟಿಯವರು ಈ ದಿನ ಮತ್ತು ಹೋದ ವಾಯಿದೆಗೆ ನ್ಯಾಯಾಲಯಕ್ಕೆ ಬಂದಿರುತ್ತಾರೆ. ನಾನು, ಚಾಸಾ-2 ಹಾಗೂ ಮಹಾಬಲ ಶೆಟ್ಟಿಯವರ ಮಗ ಎಲ್ಲರೂ ಒಟ್ಟಾಗಿ ನ್ಯಾಯಾಲಯಕ್ಕೆ ಬಂದಿರುತ್ತೇವೆ . ಮಹಾಬಲ ಶೆಟ್ಟಿಯವರ ಮಕ್ಕಳಿಗೆ ಏನಾದರೂ ಪರಿಹಾರ ಸಿಗಲೆಂದು ನಾನು ಸಾಕ್ಷಿ ನುಡಿಯುತ್ತಿದ್ದೇನೆ . ಪರಿಹಾರ ಸಿಗಬೇಕಾದರೆ ಹೇಗೆ ಸಾಕ್ಷಿ ನುಡಿಯ ಬೇಕು ಎಂದು ಸುನೀಲ್ ಶೆಟ್ಟಿಯವರ ವಕೀಲರು ಹೇಳಿಕೊಟ್ಟಿರುತ್ತಾರೆ . ಅವರು ಹೇಳಿಕೊಟ್ಟ ಪ್ರಕಾರವೇ ನಾನು ಸಾಕ್ಷಿ ನುಡಿಯುತ್ತಿದ್ದೇನೆ .

5. ಮೋಟಾರು ಬೈಕಿನ ಎರಡೂ ಕಡೆ ದೊಡ್ಡ ಸ್ಟೀಲ್ ಗಾರ್ಡ್ ಸೇ ಫ್ಟಿಗಾಗಿ ಇತ್ತು ಮೋಟಾರು ಸೈಕಲಿನ ಬಣ್ಣ ಆರೇಂಜ್ ಮತ್ತು ಕಪ್ಪು ಬಣ್ಣದಾಗಿರುತ್ತದೆ . ನಿಪಿ-2 ರಲ್ಲಿ ಇರುವಂತಹ ಗಾಡಿ ಕೆಂಪು ಬಣ್ಣದ ಗಾಡಿಯಾಗಿದ್ದು , ಅದರಲ್ಲಿ ಸ್ಟೀಲ್ ಗಾರ್ಡ್ ಇಲ್ಲ .

ಅಪಘಾತ ಸ್ಥಳದ್ಲಿಲ  ನಾನು ಇರಲ್ಲಿಲ ಎಂದರೆ ಸರಿಯಲ್ಲ . ಅಪಘಾತವನ್ನು ನಾನು ನೋಡೇ ಇಲ್ಲ ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.

ಮೂಡಬಿದಿರೆ